**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩ ೨೭೬**

## ಮಾರ್ಚ್ ೦೯, ೨೦೨೩ರ ಗುರುವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೭ನೇ ಸಭೆಯ ನಡೆವಳಿಗಳು

| | |
|---|---|
| ೦೧. ಡಾ. ವಿಜಯ್ ಪೂಣಚ್ಚ ತಂಬಂಡ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಕೆ.ಸಿ. ಶಿವಾರೆಡ್ಡಿ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

| | |
|---|---|
| ೦೭. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿ, ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ವಿಷಯ : ದಿನಾಂಕ ೦೩.೦೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೬ನೇ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

ನಿರ್ಣಯ : ದಿನಾಂಕ ೦೩.೦೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿ ೨೧೬ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

ವಿಷಯ : ದಿನಾಂಕ ೦೩.೦೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೬ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

ನಿರ್ಣಯ : ದಿನಾಂಕ ೦೩.೦೧.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೬ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

೧. ಕಾರ್ಯಕಾರಿ ಸಮಿತಿಯ ೨೧೬.೧೦ರ ವಿಷಯಕ್ಕೆ ಸಂಬಂಧಿಸಿದಂತೆ ಇ-ಪಬ್ ಧ್ವನಿ ಪುಸ್ತಕ ಹಾಗೂ ಅಮೇಜಾನ್ ಕಿಂಡಲ್‌ಗೆ ಅಳವಡಿಸಿದ ಪ್ರಕ್ರಿಯೆಗಳ ಮಾಹಿತಿಯನ್ನು ಮಾನ್ಯ ಕುಲಪತಿಗಳಿಗೆ ಸಲ್ಲಿಸುವುದು.

೨. ಕಾರ್ಯಕಾರಿ ಸಮಿತಿಯ ೨೧೬.೧೫ನೇ ವಿಷಯಕ್ಕೆ ಸಂಬಂಧಿಸಿದಂತೆ ಡೊಳ್ಳು ಕುಣಿತ ಸರ್ಟಿಫಿಕೇಟ್ ಕೋರ್ಸ್‌ಗೆ ಸಂಬಂಧಿಸಿದ ಅನುಶಾಸನಗಳನ್ನು ಸಿದ್ಧಪಡಿಸುವ ಸಂಬಂಧ ಕುಲಸಚಿವರ ಅಧ್ಯಕ್ಷತೆಯಲ್ಲಿ ನಾಲ್ಕು ನಿಕಾಯಗಳ ಡೀನರು, ಸಮನ್ವಯಾಧಿಕಾರಿಗಳು, ಯುಜಿಸಿ/ಶೈಕ್ಷಣಿಕ ಇವರುಗಳು ಸದಸ್ಯರಾಗಿ ಹಾಗೂ ನಿರ್ದೇಶಕರು ಅಧ್ಯಯನಾಂಗ ಇವರ ಸದಸ್ಯ ಸಂಚಾಲಕತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಭೆ ತೀರ್ಮಾನಿಸಿತು.

೨೧೭.೦೧ ೨೦೨೨-೨೩ನೇ ಸಾಲಿನ ಪಿಎಚ್.ಡಿ. ಪ್ರವೇಶ ಕುರಿತು.

ನಿರ್ಣಯ : ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ ೭.೩.೨೦೨೩ರಂದು ನಡೆದ ಡೀನ್ ಸಮಿತಿಯಲ್ಲಿ ವಿಷಯವು ಮಂಡನೆಯಾಗಿರುವುದರಿಂದ ಡೀನ್ ಸಮಿತಿ ನಡೆವಳಿಗಳ ಚರ್ಚೆಯಲ್ಲಿ ಸದರಿ ವಿಷಯವನ್ನು ಪರಿಶೀಲಿಸಲು ನಿರ್ಣಯಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೧೭.೦೨ ದಿನಾಂಕ ೦೭.೦೩.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೦೭.೦೩.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೭.೩.೨೦೨೩ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೭.೦೩ ३೭೧ (ಜೆ) ಅಡಿಯಲ್ಲಿ ೨೦೧೮ರಲ್ಲಿ ನೇಮಕಗೊಂಡ ನಾಲ್ವರು ಬೋಧಕ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಸಂಬಂಧ ದಿನಾಂಕ ೯.೩.೨೦೨೩ರಂದು ನಡೆದ ಪರಿಶೀಲನಾ ಸಮಿತಿ ಸಭೆಯ ನಡೆವಳಿಗಳ ಕುರಿತು.

ಟಿಪ್ಪಣಿ : ३೭೧ (ಜೆ) ಅಡಿಯಲ್ಲಿ ನೇಮಕಗೊಂಡ ಡಾ. ವೆಂಕಟಗಿರಿ ದಳವಾಯಿ, ಡಾ. ಅಮರೇಶ ಯತಗಲ್, ಡಾ. ಶಾಂತಪ್ಪ, ಹಾಗೂ ಡಾ. ಈ. ಯರ್ರಿಸ್ವಾಮಿ ಈ ನಾಲ್ವರು ಬೋಧಕ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಸಂಬಂಧ ದಿನಾಂಕ ೯.೩.೨೦೨೩ರಂದು ನಡೆದ ಪರಿಶೀಲನಾ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ನಾಲ್ವರು ಬೋಧಕ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆ ಸಂಬಂಧ ದಿನಾಂಕ ೯.೩.೨೦೨೩ರಂದು ನಡೆದ ಮೂರು ಪರಿಶೀಲನಾ ಸಮಿತಿ ಸಭೆಗಳ ನಡೆವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿ, ಪರಿಶೀಲಿಸಿ ಅನುಮೋದನೆ ನೀಡಿತು. ವಿಜ್ಞಾನ ನಿಕಾಯದ ಡೀನರಾದ ಡಾ. ಶೈಲಜ ಇಂ. ಹಿರೇಮಠ ಅವರು ಸದರಿ ತೀರ್ಮಾನಕ್ಕೆ ತಾವು ಬಾಧ್ಯಸ್ಥರಲ್ಲ ಎಂದು ಅಭಿಪ್ರಾಯವನ್ನು ತಿಳಿಸಿದ್ದಾರೆ.

೨೧೭.೦೪ ಕನ್ನಡ ವಿಶ್ವವಿದ್ಯಾಲಯದ ವಾರ್ಷಿಕ ವರದಿ ಸಿದ್ಧತೆ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ೨೦೨೧-೨೨ ಹಾಗೂ ೨೦೨೨-೨೩ನೇ ಸಾಲಿನ ವಾರ್ಷಿಕ ವರದಿಗಳನ್ನು ಸಕಾಲದಲ್ಲಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ವಾರ್ಷಿಕ ವರದಿಯನ್ನು ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿತು.

೧. ವಾರ್ಷಿಕ ವರದಿಯನ್ನು ಶೀಘ್ರವಾಗಿ ಸಿದ್ಧಪಡಿಸುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದು.

೨. ನಿಕಾಯಗಳ ಡೀನರು ವಾರ್ಷಿಕ ವರದಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ದೃಢೀಕರಿಸುವುದು.

೨೧೭.೦೫ ದಿನಾಂಕ ೧೬.೦೨.೨೦೨೩ರಂದು ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ (ಹಂತ ೧೩ಎ ರಿಂದ ೧೪) ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿ ನೀಡುವ ಸಲುವಾಗಿ ನಡೆಸಿದ ಆಯ್ಕೆ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ಟಿಪ್ಪಣಿ : ಡಾ. ಎಂ. ಮಲ್ಲಿಕಾರ್ಜುನಗೌಡ, ಸಹ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಇವರು ಸಿಎಎಸ್ ಮುಂಬಡ್ತಿಗಾಗಿ ಸಲ್ಲಿಸಿದ ಶೈಕ್ಷಣಿಕ ಅರ್ಹತೆಯನ್ನು ಪರಿಶೀಲನಾ ಸಮಿತಿಯು ನಿಗದಿತ ಮೌಲ್ಯ ನಿರ್ಧಾರಣಾ **ಅವಧಿ ೨೦೧೭-೧೮, ೨೦೧೮-೧೯, ೨೦೧೯-೨೦, ೨೦೨೦-೨೧, ೨೦೨೧-೨೨ರೊಳಗೆ** ಪೂರೈಸಿರುವ ಸಂಶೋಧನ ಮತ್ತು ಬೋಧನ ಚಟುವಟಿಕೆಗಳ ಮೌಲ್ಯಮಾಪನ ವಿವರಗಳು ಹಾಗೂ ಅಂಕಗಳನ್ನು ಪರಿಶೀಲಿಸಿ ಅರ್ಹತಾದಾಯಕ ಅಂಕಗಳನ್ನು ಗಳಿಸಿರುವುದಾಗಿ ವರದಿ ನೀಡಿದೆ. ಇದರನ್ವಯ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಶಿಫಾರಸ್ಸಿಗೆ ಅನುಗುಣವಾಗಿ ಯುಜಿಸಿ ನಿಯಾಮವಳಿ ೨೦೧೮ರಲ್ಲಿ ಪರಿಭಾಷಿಸಿದಂತೆ ಸಹ ಪ್ರಾಧ್ಯಪಕರ ಹುದ್ದೆ ಶೈಕ್ಷಣಿಕ ಹಂತ ೧೩ಎ ರಿಂದ ಪ್ರಾಧ್ಯಾಪಕರ ಹುದ್ದೆಗೆ ಶೈಕ್ಷಣಿಕ ಹಂತ ೧೪ಕ್ಕೆ ಬಡ್ತಿ ನೀಡಿದ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೧೬.೦೨.೨೦೨೩ರಂದು ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆ (ಹಂತ ೧೩ಎ ರಿಂದ ೧೪) ಸಿ.ಎ.ಎಸ್. ಅಡಿಯಲ್ಲಿ ಮುಂಬಡ್ತಿ ನೀಡುವ ಸಲುವಾಗಿ ನಡೆಸಿದ ಆಯ್ಕೆ ಸಮಿತಿ ಸಭೆಯ ನಡೆವಳಿಯಂತೆ ಪ್ರಾಧ್ಯಾಪಕ ಹುದ್ದೆಗೆ ಬಡ್ತಿ ನೀಡಿದ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡಿತು.

ಸಭೆ ಪೂರ್ಣಗೊಂಡ ನಂತರ ಮಾನ್ಯ ಕುಲಸಚಿವರು ವಂದನಾರ್ಪಣೆಯೊಂದಿಗೆ ಸಭೆ ಪೂರ್ಣಗೊಳಿಸಿದರು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

10.3.23
ಕುಲಪತಿಗಳು
ಅಧ್ಯಕ್ಷರು